**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 78 ಪ್ರಾ.ಸಾ. : 33**

ಸಾಕ್ಷಿಯ ಹೆಸರು : ನಾರಾಯಣ ದೇವ ಮೇಲಿನಕೇರಿ

ತಂದೆಯ ಹೆಸರು : ದೇವ ಮೇಲಿನಕೇರಿ

ವಯಸ್ಸು : 73 ವರ್ಷ

ಉದ್ಯೋಗ : ಕೃಷಿ

ವಾಸ : ಕಾನಗೋಡ ಗ್ರಾಮ.

**ದಿನಾಂಕಃ 27-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ-**

1. ನಾನು ಹುಟ್ಟಿದಾಗಿನಿಂದ ಸಿದ್ದಾಪುರ ತಾಲೂಕಿನ ಕಾನಗೋಡು ಗ್ರಾಮದಲ್ಲಿ ವಾಸ ಇದ್ದೇನೆ. ನ್ಯಾಯಾಲಯದಲ್ಲಿರುವ ಆರೋಪಿ ಊರಿನವರು ಆಗಿದ್ದರಿಂದ ಪರಿಚಯ ನನಗೆ ಇಲ್ಲ. ಆರೋಪಿ ನಮ್ಮ ಗ್ರಾಮದಲ್ಲಿ ಹಿಂದೆ ಒಂದು ಬಾರಿ ಗ್ರಾಮ ಪಂಚಾಯತಿ ಅಧ್ಯಕ್ಷರು ಆಗಿದ್ದರು. ನನಗೆ ಕಾನಗೋಡು ಗ್ರಾಮದಲ್ಲಿ ಮನೆ ಇದೆ. 2001-02 ರಲ್ಲಿ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ಕಾನಗೋಡು ಗ್ರಾಮ ಪಂಚಾಯತಿಗೆ ರೂ.20 ಲಕ್ಷ ಅನ್ನು ಮಂಜೂರು ಮಾಡಿದ್ದರು ಮತ್ತು ಆ ಬಗ್ಗೆ 210 ಫಲಾನುಭವಿಗಳನ್ನು ಗುರುತಿಸಿದ್ದರು ಮತ್ತು ಅದರಲ್ಲಿ ನಾನು ಸಹ ಒಬ್ಬ ಫಲಾನುಭವಿ ಆಗಿದ್ದೆ. ಆ ಯೋಜನೆ ಅಡಿಯಲ್ಲಿ ಪ್ರತಿ ಫಲಾನುಭವಿಗಳಿಗೆ ತಲಾ ರೂ.3000/- ಸಹಾಯಧನ ನೀಡಬೇಕಿತ್ತು. ನನಗೆ ಆ ರೀತಿ ಸಹಾಯ ಧನ ನೀಡಿರುವುದಿಲ್ಲ. ನನಗೆ ಶೌಚಾಲಯವನ್ನು ನನ್ನ ಮನೆಗೆ ನಿರ್ಮಾಣ ಮಾಡಿಕೊಟ್ಟಿದ್ದಾರೆ. ಪೊಲೀಸನವರು ನನ್ನನ್ನು ಈ ಪ್ರಕರಣದ ಬಗ್ಗೆ ವಿಚಾರಣೆ ಮಾಡಿದ್ದಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ನಾನು ತನಿಖಾಧಿಕಾರಿ ಮುಂದೆ ನನಗೆ ಶೌಚಾಲಯ ನಿರ್ಮಾಣ ಮಾಡಿಕೊಟ್ಟಿಲ್ಲ ಮತ್ತು ರೂ.3000/- ಅನುದಾನ ಸಹ ಗ್ರಾಮ ಪಂಚಾಯತಿಯಿಂದ ಸದರಿ ಯೋಜನೆ ಅಡಿಯಲ್ಲಿ ನೀಡಿಲ್ಲ ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಆ ಬಗ್ಗೆ ನಿಪಿ-68 ರಂತೆ ಲೋಕಾಯುಕ್ತ ಆರಕ್ಷಕ ನಿರೀಕ್ಷಕರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಊರಿನವನು ಮತ್ತು ನನಗೆ ಪರಿಚಯ ಇದ್ದಾನೆ. ಆದ್ದರಿಂದ ಆರೋಪಿಗೆ ಬಚಾವು ಮಾಡಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದಃ-**

3. ನನಗೆ ರೂ.3000/- ಅನುದಾನ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ